ವಿಷಯ : ಟಿ. ನರಸೀಪುರ ತಾಲ್ಲೂಕು ತಲಕಾಡು ಹತ್ತಿರ ಕಾವೇರಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣದ ಬಗ್ಗೆ.

ಪ್ರಶ್ನೆ : 159 (609) ಶ್ರೀ ಟಿ ಪಿ. ಬೋರಯ್ಯ (ಬನ್ನೂರು) .—ಮಾನ್ಯ ಲೋಕೋಪಯೋಗಿ ಹಾಗೂ ನಿರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಟಿ.ನರಸೀಪುರ ತಾಲ್ಲೂಕು ತಲಕಾಡು ಹತ್ತಿರ ಕಾವೇರಿನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ ಕಾರ್ಯವನ್ನು ಇನ್ನೂ ಪ್ರಾರಂಭಿಸದಿರ ವುದು ನಿಜವಲ್ಲವೇ ;

ಆ) ಹಾಗಿದ್ದಲ್ಲಿ ಸೇತುವೆ ಕಾಮಗಾರಿಯನ್ನು ಪ್ರಾರಂಭಿಸುವುದಕ್ಕೆ ಸರ್ಕಾರದವರಿಗಿರುವ ತೊಂದರೆ ಏನು ;

ಇ) ಸದರಿ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ?

ಉತ್ತರ: ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು) —

ಅ) ನಿಜ ಆ) ಈ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ ಮತ್ತು ಸಧ್ಯದಲ್ಲಿ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ.

ಇ) 'ಅ' ಗೆ ಕೊಟ್ಟ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಚ್.ಡಿ. ದೇವೇಗೌಡ.—ಅಧ್ಯಕ್ಷರೇ, ಈ ಹಂತದಲ್ಲಿ ಮಾನ್ಯ ಸದಸ್ಯರ ಸಹಾಯಕ್ಕೆ ಇನ್ನೂ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುತ್ತೇನೆ. ಹೆಮ್ಮಿಗಿ ಹತ್ತಿರ ಸ್ಥಳವನ್ನು ಮಾನ್ಯ ಸದಸ್ಯರಾದ ಟಿ.ಪಿ. ಬೋರಯ್ಯನವರನ್ನೂ ಕರೆದುಕೊಂಡು ಹೋಗಿ ಎರಡು ಸಲ ಪರಿಶೀಲನೆ ಮಾಡಿದ್ದೇವೆ. ಹೆಮ್ಮಿಗಿ ಬಳಿ ಸೇತುವೆ ಕಟ್ಟಿದರೆ ಸುಮಾರು 70 ಲಕ್ಷ ರೂಪಾಯಿ ಖರ್ಚಾಗುತ್ತದೆ. ಅದೇ ಮಹಾಲಂಗಿ ಹತ್ತಿರ ಸೇತುವೆ ಕಟ್ಟಬೇಕಾಗಿದ್ದರೆ ಸುಮಾರು ಒಂದೂವರೆ ಕೋಟಿ ರೂಪಾಯಿ ಖರ್ಚಾಗುತ್ತದೆಂದು ಅಂದಾಜಾಗಿದೆ. ಹಾಗೂ ಇಲ್ಲಿ ಸೇತುವೆ ಕಟ್ಟಲು ಕೆಲವು ತಾಂತ್ರಿಕ ಅಡಚಣೆಗಳು ಇವೆ. ಅಲ್ಲಿ ನದಿ ತುಂಬಾ ಅಗಲವಾಗಿ ಹರಿಯುತ್ತಿದ್ದು ಅಲ್ಲಿ ಸೇತುವೆ ಕಟ್ಟಲು ಕೆಳಗೆ ಭೂಮಿ ಗಟ್ಟಿ ಇರುವುದಿಲ್ಲ. ಜೊತೆಗೆ ಈ ಸೇತುವೆ ಕಟ್ಟಬೇಕೆಂದಿರುವ ಜಾಗ ಮಹಾಲಂಗಿ ಹಳ್ಳಿಯ ಪಕ್ಕದಲ್ಲಿಯೇ ಇದ್ದು ಇದನ್ನು ಕಟ್ಟಿದ್ದೇ ಆದರೆ ಆ ಹಳ್ಳಿಗೆ ತೊಂದರೆಗಳಾಗಬಹುದು. ಹಾಗೂ ಈ ಎರಡೂ ಕಡೆಯೂ ಸೇತುವೆ ಆಗಬೇಕೆಂದು ಅಲ್ಲಿನ ಜನರ ಒತ್ತಡ ಇದೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ಯಾವುದೇ ನಿರ್ಣಯ ತೆಗೆದುಕೊಂಡಿಲ್ಲ. ಆದರೂ ಅತ್ಯಂತ ಶೀಘ್ರವಾಗಿ ಈ ಸೇತುವೆ ನಿರ್ಮಾಣ ಆಗಬೇಕೆನ್ನುವುದು ಸರ್ಕಾರದ ಇಚ್ಛೆ ಆಗಿದೆ.

ಶ್ರೀ ಟಿ. ಪಿ. ಬೋರಯ್ಯ .— ಮಾನ್ಯ ಮಂತ್ರಿಗಳು ಕೊಟ್ಟ ಉತ್ತರದಿಂದಾಗಿ ನಾನು ಮತ್ತೆ ಉಪ ಪ್ರಶ್ನೆಯನ್ನು ಕೇಳುವುದಕ್ಕೆ ಹೋಗುವುದಿಲ್ಲ.

ವಿಷಯ : ಮುಂಡರಗಿ ತಾಲ್ಲೂಕಿನಲ್ಲಿ ಏತ ನೀರಾವರಿ ಯೋಜನೆ ಬಗ್ಗೆ

ಪ್ರಶ್ನೆ : 160 (372) ಶ್ರೀ ಕೆ. ಎಚ್. ಕುರುಡಗಿ (ಮುಂಡರಗಿ) . - ಮಾನ್ಯ ಸಣ್ಣ ನಿರಾವರಿ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಮುಂಡರಗಿ ತಾಲ್ಲೂಕಿನಲ್ಲಿ ಏತ ನೀರಾವರಿ ಯೋಜನೆಗೆ ಸಾಕಷ್ಟು ಹಣವನ್ನು ಮಂಜೂರು ಮಾಡಿಲ್ಲದಿರುವುದಕ್ಕೆ ಕಾರಣಗಳು ಏನು ;

ಆ) ಮುಂಡರಗಿ ತಾಲ್ಲೂಕು ಏತ ನೀರಾವರಿಗಳು ಕಕ್ಕೂರ, ಶಿಂಗಟಾಲೂರ, ಎರಡನೇ ಹಂತ ಪೂರ್ತಿ ಆಗಿಲ್ಲದಿರುವುದಕ್ಕೆ ಕಾರಣಗಳು ಏನು. ಹಾಗೂ ಇವನ್ನು ಯಾವಾಗ ಪೂರ್ತಿ ಮಾಡಲಾಗುವುದು?

ಉತ್ತರ : ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು) .—

ಅ) ಸಾಕಷ್ಟು ಹಣವನ್ನು ಮಂಜೂರು ಮಾಡಲಾಗಿದೆ.

ಆ) ಏತ ನೀರಾವರಿ ಕಕ್ಕೂರ ಎರಡನೇ ಹಂತದ ಕಟ್ಟಡದ ಕೆಲಸ ಈಗಾಗಲೇ ಪೂರ್ತಿ ಆಗಿದೆ. ಮತ್ತು ಯಂತ್ರೋಪಕರಣಗಳನ್ನು ಒದಗಿಸುವ ಮತ್ತು ಕೂಡ್ರಿಸುವ ಕೆಲಸದ ಬಗ್ಗೆ ಈಗಾಗಲೆ ಟೆಂಡರ್ ಕರೆಯಲಾಗಿದೆ. ಈ ಕೆಲಸವು ಮಾರ್ಚಿ 84ರ ವೇಳೆಗೆ ಮುಗಿಯುವ ನಿರೀಕ್ಷೆ ಇದೆ.

ಏತ ನೀರಾವರಿ ಸಿಂಗಟಾಲೂರ ಎರಡನೇ ಹಂತದ ಯೋಜನೆಯ ಪರಿಷ್ಕೃತ ಅಂದಾಜು ಪತ್ರಿಕೆ ತಯಾರಾದ ನಂತರ ಆಡಳಿತಾತ್ಮಕ ಒಪ್ಪಿಗೆಯನ್ನು ಕೊಟ್ಟ ನಂತರ ಕೆಲಸವನ್ನು ಕೈಗೊಳ್ಳಲಾಗುವುದು.

ಶ್ರೀ ಕೆ.ಎಚ್. ಕುರುಡಗಿ .— ಸ್ವಾಮಿ, ತಮ್ಮ ಉತ್ತರದಲ್ಲಿ ಸಾಕಷ್ಟು ಹಣವನ್ನು ಮಂಜೂರು ಮಾಡಿದ್ದೇವೆಂದು ಹೇಳಿದ್ದೀರಿ. ಈ ಕೆಲಸ 1974-75ರಲ್ಲೇ ಪ್ರಾರಂಭವಾಗಿದ್ದರೂ ಇದುವರೆಗೂ ಏತಕ್ಕೆ ಮುಗಿಯಲಿಲ್ಲ. ಸಿಂಗಟಾಲೂರು ಏತ ನೀರಾವರಿ ಬಗ್ಗೆ ಟೆಂಡರನ್ನು ಮೂರನೇ ಸಾರಿ ಕರೆದರೂ ಏನೂ ಆಗಿಲ್ಲ. ಇದಕ್ಕೆ ಕಾರಣ ಏನು ?

ಶ್ರೀ ಆರ್ ಎನ್. ಲಕ್ಷ್ಮೀಪತಿ :— ಸಿಂಗಟಾಲೂರು ಏತ ನೀರಾವರಿ ಕೆಲಸದ ಮೊದಲನೆಯ ಹಂತ ಆಗಿದೆ. ಎರಡನೇ ಹಂತದ್ದು ತಯಾರಾಗುತ್ತಿದೆ. ಟೆಕ್ನಿಕಲ್ ಫಿಸಿಬಿಲಿಟಿ ವರದಿ ಬಂದಿದೆ.

ಟೋಕನ್ ಗ್ರಾಂಟ್‌ನಲ್ಲಿ ಹಣ ಇಟ್ಟಿದ್ದೇವೆ; ಅದಕ್ಕೆ ಎಷ್ಟು ಹಣ ಬೇಕೋ ಅದನ್ನು ಒದಗಿಸಿ ಪೂರ್ಣ ಮಾಡುತ್ತೇವೆ.

ಶ್ರೀ ಕೆ.ಎಚ್. ಕುರುಡಗಿ.— ಸೆಂಗಟಾಲೂರು ಯೋಜನೆಯ ಮೊದಲನೆಯ ಹಂತ ಮುಗಿದು ನಾಲ್ಕು ವರ್ಷಗಳಾಗಿವೆ. ಎರಡನೆಯ ಹಂತ ಇನ್ನೂ ಪ್ರಾರಂಭವಾಗಿಲ್ಲ, ಅಂದಾಜು ಮಾಡಬೇಕು ಅಂದರೆ ತಮಗೆ ಇನ್ನೂ ಎಷ್ಟು ವರ್ಷಗಳು ಬೇಕು ?

ಶ್ರೀ ಆರ್.ಎನ್. ಲಕ್ಷ್ಮೀಪತಿ.— ಈಗ ಈ ಕೆಲಸ ಒಂದು ಹಂತಕ್ಕೆ ಬಂದಿದೆ. ಬಜೆಟ್‌ನಲ್ಲಿ ಟೋಕನ್ ಗ್ರಾಂಟ್ ಎಂದು ಕೊಟ್ಟಿದ್ದೇವೆ. ಅದಷ್ಟು ಜಾಗ್ರತೆ ಅಂದಾಜು ತಯಾರಿಸಬೇಕೆಂದು ಹೇಳಿ, ಅದಕ್ಕೆ ಮಂಜೂರಾತಿ ಕೊಟ್ಟು, ಕೆಲಸವನ್ನು ಪೂರ್ಣ ಮಾಡುತ್ತೇವೆ.

ವಿಷಯ :— ಘಟಪ್ರಭಾ ಎಡದಂಡೆ ಹಾಗೂ ಮಲಪ್ರಭಾ ಎಡದಂಡೆ ಕಾಲುವೆ ಕುರಿತು

ಪ್ರಶ್ನೆ. 161(22) **ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ** (ಗುಳೆದಗುಡ್ಡ).— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ಘಟಪ್ರಭಾ ಎಡದಂಡೆ ಹಾಗೂ ಮಲಪ್ರಭಾ ಎಡದಂಡೆ ಕಾಲುವೆ ಕೆಲಸವು ಬಾದಾಮಿ ತಾಲ್ಲೂಕಿನಲ್ಲಿ ನೆಲಗುದಿಗೆ ಬಿದ್ದಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಆ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಉತ್ತರ : ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).— ಅ) ಘಟಪ್ರಭಾ ಎಡದಂಡೆ ಕಾಲುವೆ ಕೆಲಸವು ಬಾದಾಮಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವುದಿಲ್ಲ. ಆದರೆ ಮಲಪ್ರಭಾ ಎಡದಂಡೆ ಕಾಲುವೆಯ 89 ಕಿ. ಮಿ. ರಿಂದ 122 ಕಿ. ಮಿ. ರ ವರೆಗಿನ ಭಾಗವು ಬಾದಾಮಿ ತಾಲ್ಲೂಕಿನಲ್ಲಿ ಬರುತ್ತಿದ್ದು, ಕೆಲಸಗಳು ಪ್ರಗತಿಯಲ್ಲಿವೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇದರಲ್ಲಿ ಇಷ್ಟು ಮಾತ್ರ ಹೇಳಬಲ್ಲೆ. ಘಟಪ್ರಭಾ ಬಲದಂಡೆ ನಾಲೆಯಿಂದ 7,800 ಹೆಕ್ಟೇರಿ ನಷ್ಟು ನೀರಾವರಿಯಾಗುತ್ತದೆ. ಘಟಪ್ರಭಾ ಎಡದಂಡೆ ಕಾಲುವೆ ಬಾದಾಮಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವುದಿಲ್ಲ. ಕಡಬಗಟ್ಟಿ ಟನಲ್ ಕೆಲಸ ಮುಗಿದ ಮೇಲೆ ಆ ಕೆಲಸ ತೆಗೆದುಕೊಳ್ಳಬೇಕಾಗುತ್ತದೆ. ಈಗ ಮಲಪ್ರಭಾದಿಂದ 1984-85ರಲ್ಲಿ 5 ಸಾವಿರ ಹೆಕ್ಟೇರಿಗೆ ನೀರು ಕೊಡಬೇಕೆಂದು ಇದ್ದೇವೆ. ಈ ವರ್ಷ ರಾವ್‌ದುರ್ಗ ಬಾರ್ಡರ್ ಕ್ರಾಸ್ ಮಾಡಿ ಬಾದಾಮಿ ತಾಲ್ಲೂಕಿಗೆ ಎಂಟರ್ ಆಗುವಂತೆ ಮಾಡುತ್ತೇವೆ

ಶ್ರೀ ಮಲ್ಲಿಕಾರ್ಜುನ ವಿ ಬನ್ನಿ.— ಡಿಸೆಂಬರ್ 1983ಕ್ಕೆ ಈ ಕಾರ್ಯ ಮುಗಿಯಬೇಕಾಗಿತ್ತು. ಏತಕ್ಕೆ ಹಾಗೆ ಉಳಿದಿದೆಯೋ ಗೊತ್ತಿಲ್ಲ. ಬಾದಾಮಿ ತಾಲ್ಲೂಕು ಎಷ್ಟು ಹಿಂದುಳಿದ ಪ್ರದೇಶ ಎಂದು ಸಚಿವರ ಗಮನಕ್ಕೆ ನಾನು ತರಬಯಸುವುದಿಲ್ಲ. ಏಕೆಂದರೆ ಅವರೇ ಅಲ್ಲಿ ಬಂದು ಪರಿಸ್ಥಿತಿಯನ್ನು ಗಮನಿಸಿದ್ದಾರೆ. ಇಷ್ಟಾದರೂ ಸಹಿತ ಏತಕ್ಕೆ ಇನ್ನೂ ಹೆಚ್ಚಿನ ಗಮನ ಕೊಟ್ಟಿಲ್ಲ ಎನ್ನುವ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಹೆಚ್.ಡಿ. ದೇವೇಗೌಡ.— ನೀರಾವರಿ ದೃಷ್ಟಿಯಿಂದ, ಬಾದಾಮಿ ತಾಲ್ಲೂಕು ಸ್ವಲ್ಪ ಹಿಂದುಳಿದ ಪ್ರದೇಶ ಎನ್ನುತಕ್ಕದ್ದನ್ನು ಒಪ್ಪಿಕೊಳ್ಳುತ್ತೇನೆ. ಆದಕ್ಕೋಸ್ಕರ ಈ ಎರಡು ಯೋಜನೆಗಳನ್ನು ಜಾರಿಗೆ ತರಬೇಕೆಂಬುದು ಸರ್ಕಾರದ ಆಕಾಂಕ್ಷೆ ಆಗಿದೆ. ಮಲಪ್ರಭಾ ಯೋಜನೆಯಿಂದ ಸುಮಾರು 29 ಸಾವಿರದ 855 ಹೆಕ್ಟೇರುಗಳಿಗೆ ನೀರು ಕೊಡಬೇಕೆಂದು ಈಗಾಗಲೇ ಸರ್ಕಾರ ನಿರ್ಣಯ ಮಾಡಿದೆ. 29,855 ಹೆಕ್ಟೇರ್ ಅಂದರೆ ಸುಮಾರು 66 ಸಾವಿರ ಎಕರೆಯಾಗುತ್ತದೆ. ಆದ್ದರಿಂದ ಈ ಭಾಗ ಹಿಂದೆ ಬೀಳಲಿವುದಿಲ್ಲ ಅದು ನಿಮ್ಮ ಕಾಲದಲ್ಲಿಯೇ ಮುಂದೆ ಬರುತ್ತದೆ

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.— ತಾವು ಅದನ್ನು ಕೃತಿಯಲ್ಲಿ ಮಾಡಿ ತೋರಿಸಿ, ಆಗ ನಾನು ತಮಗೆ ಅಭಿನಂದನೆ ಸಲ್ಲಿಸುತ್ತೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.— ಕಡಬಗಟ್ಟಿ ಟನಲ್ ಆಗಬೇಕೆಂದರೆ ಕೆಲವು ತೊಂದರೆಗಳು ಇವೆ ಎಂದು ಗೊತ್ತು ಅಲ್ಲಿ ಕಂಟ್ರಾಕ್ಟರ್ ಸಮಸ್ಯೆ ಒಂದು ಇತ್ತು. ಈಗ ಅದನ್ನು ಕ್ಯಾನ್ಸಲ್ ಮಾಡುತ್ತೀರಾ ? ಅಥವಾ ಮುಂದುವರಿಸುತ್ತೀರಾ ?

ಶ್ರೀ ಹೆಚ್.ಡಿ ದೇವೇಗೌಡ.— ಅದನ್ನು ಈಗ ಹೇಳಲಿಕ್ಕೆ ಆಗುವುದಿಲ್ಲ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.— ಮಲಪ್ರಭಾ ಎಡದಂಡೆ ನಾಲೆಯಲ್ಲಿ 12 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ಈ ವರ್ಷ ನೀರಾವರಿ ಮಾಡಿಕೊಡಬೇಕೆಂದು ನಿಗದಿಯಾಗಿತ್ತು. ಈ ವರ್ಷ 5691 ಹೆಕ್ಟೇರುಗಳಿಗೆ ತಾವು ಕೊಡುತ್ತಿದ್ದೀರಿ, ಇದನ್ನು ತಾವು ಈಗ ಕೊಟ್ಟಿದ್ದೀರೋ ಅಥವಾ ಇನ್ನು ಮೇಲೆ ಕೊಡುತ್ತೀರೋ ?

ಶ್ರೀ ಹೆಚ್.ಡಿ. ದೇವೇಗೌಡ.— ತಾವು ಸಹ ನೀರಾವರಿ ಮಂತ್ರಿಗಳಾಗಿ ಕೆಲಸ ಮಾಡಿರುವುದ